ಸ್ವಾತಂತ್ರ್ಯದ ಅಮೃತ ಮಹೋತ್ಸವ

ನವ ಭಾರತಕ್ಕಾಗಿ
ನವ ಕರ್ನಾಟಕ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ

ನವ ಭಾರತದ ಆಶೋತ್ತರಗಳನ್ನು ನನಸು ಮಾಡಲು ಪಣ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ-ಬಲಿದಾನ ಸ್ಮರಿಸಿ, ಗೌರವ ಸಲ್ಲಿಸುವುದರ ಜೊತೆಗೆ ಅವರ ಕನಸಿನ ಭಾರತವನ್ನು ನನಸು ಮಾಡಲು ಪಣ ತೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಕಳೆದ 8 ವರ್ಷಗಳಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಗುರುತರವಾದ ಸಾಧನೆ ಮಾಡಿದೆ. ಕರ್ನಾಟಕದಲ್ಲಿ ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ ಮಾಡಲು ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಪಣ ತೊಟ್ಟಿದ್ದು, ಹಲವಾರು ಜನಪರ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.

ಅಮೃತ ಯೋಜನೆಗಳು

- ಭಾರತದ 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥವಾಗಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಅಮೃತ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

ರೈತರ ಹಿತರಕ್ಷಣೆ

- **ರೈತರ ಬಲವರ್ಧನೆಗಾಗಿ ಸೆಕಂಡರಿ ಕೃಷಿ ನಿರ್ದೇಶನಾಲಯ ಸ್ಥಾಪನೆ**
- **ರೈತ ಶಕ್ತಿ ಯೋಜನೆ:** ಕೃಷಿಯಲ್ಲಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು ಡೀಸೆಲ್ ಸಹಾಯಧನ. **ರೂ. 400 ಕೋಟಿ** ಅನುದಾನ. ಪ್ರತಿ ಎಕರೆಗೆ **ರೂ.250** ರಂತೆ ಗರಿಷ್ಠ 5 ಎಕರೆಗೆ ಸಹಾಯಧನ
- **ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಸರ್ಕಾರ):** 2021-22ನೇ ಸಾಲಿನಲ್ಲಿ **50.35 ಲಕ್ಷ** ರೈತರಿಗೆ **ರೂ.1,975.12 ಕೋಟಿ** ವಿತರಣೆ. 2022-23ನೇ ಸಾಲಿನಲ್ಲಿ **47.83 ಲಕ್ಷ** ರೈತರಿಗೆ **ರೂ.956.71 ಕೋಟಿ** ಡಿಬಿಟಿ ಮೂಲಕ ವರ್ಗಾವಣೆ
- ಕೃಷಿ ಯಾಂತ್ರೀಕರಣ, ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳಿಗೆ **ರೂ.483.56 ಕೋಟಿ**ಗಳ ಸಹಾಯಧನ ವಿತರಣೆ. **4.54 ಲಕ್ಷ** ರೈತರಿಗೆ ಪ್ರಯೋಜನ.
- **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ: 3.12 ಲಕ್ಷ** ರೈತರ ಜಮೀನುಗಳಲ್ಲಿ ಸೂಕ್ಷ್ಮ ನೀರಾವರಿ ಘಟಕಗಳ ಸ್ಥಾಪನೆ
- **ಕೃಷಿ ಸಂಜೀವಿನಿ ಯೋಜನೆ:** ರೈತರ ತಾಕುಗಳಲ್ಲಿ ಕೀಟ, ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆಗಾಗಿ **160 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಲೋಕಾರ್ಪಣೆ**
- **ಕೃಷಿ ಮೂಲಸೌಕರ್ಯ ನಿಧಿ ಯೋಜನೆಗೆ ಪ್ರಶಸ್ತಿ**

ಅಮೃತ ಮಹೋತ್ಸವ

- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಅಮೃತ ಭಾರತಿಗೆ ಕನ್ನಡದಾರತಿ ಕಾರ್ಯಕ್ರಮ. ಸ್ವಾತಂತ್ರ್ಯ ಹೋರಾಟಗಾರರ ಕುರಿತ **75 ಪುಸ್ತಕಗಳ** ಬಿಡುಗಡೆ.
- **ಸ್ವಾತಂತ್ರ್ಯ ಹೋರಾಟಗಾರರ 75 ಸ್ಥಳಗಳನ್ನು** ಗುರುತಿಸಿ ಸ್ಮಾರಕ ಸ್ಥಾಪನೆ. ಈ ಕುರಿತು ಪ್ರಧಾನಿ ಮೋದಿಯವರ ಮನ್-ಕಿ-ಬಾತ್ ಕಾರ್ಯಕ್ರಮದಲ್ಲಿ ಶ್ಲಾಘನೆ
- ಪ್ರಧಾನಿಯವರ **'ಹರ್ ಘರ್ ತಿರಂಗ'** ಅಭಿಯಾನ ಯಶಸ್ವಿಗೊಳಿಸಲು ಮಾಡಿದ ಮನವಿಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ಲಭಿಸಿದೆ. ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು

ವಿದ್ಯಾನಿಧಿ ಯೋಜನೆ

- **ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ರೈತ ವಿದ್ಯಾನಿಧಿ ಯೋಜನೆ: ರೂ.439.95 ಕೋಟಿ** ವಿದ್ಯಾರ್ಥಿವೇತನ ಹಂಚಿಕೆ ಮಾಡಲಾಗಿದೆ. ಫಲಾನುಭವಿಗಳು – **10.03 ಲಕ್ಷ**. ಈ ಯೋಜನೆಯನ್ನು ಮೀನುಗಾರರು, ಹಳದಿ ಬೋರ್ಡ್ ಟ್ಯಾಕ್ಸಿ ಚಾಲಕರು ಹಾಗೂ ನೇಕಾರರ ಮಕ್ಕಳಿಗೂ ವಿಸ್ತರಿಸಲಾಗಿದೆ,

ಮೀನುಗಾರಿಕೆ-ಹೈನುಗಾರಿಕೆ ರೇಷ್ಮೆಗೆ ಪ್ರೋತ್ಸಾಹ

- ಮೀನುಗಾರರ ಆದಾಯ ಹೆಚ್ಚಿಸಲು **100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ** ನೆರವು ನೀಡುವ **"ಮತ್ಸ್ಯ ಸಿರಿ"** ಯೋಜನೆ
- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್ ಯೋಜನೆ**
- ಪ್ರತಿ ಟನ್ ದ್ವಿತಳಿ ರೇಷ್ಮೆ ಗೂಡಿಗೆ **ರೂ.10 ಸಾವಿರ,** ದ್ವಿತಳಿ ಬಿತ್ತನೆ ಗೂಡಿಗೆ **ಕೆ.ಜಿ.ಗೆ ರೂ. 50 ಪ್ರೋತ್ಸಾಹಧನ** ಹೆಚ್ಚಳ

ಶಿಕ್ಷಣಕ್ಕೆ ಮಹತ್ವ

- ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ
- **ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕೆಐಟಿ)ಗಳಾಗಿ** ರಾಜ್ಯದ 7 **ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣ**
- ರಾಜ್ಯದಲ್ಲಿ **ರೂ. 1,412 ಕೋಟಿ** ವೆಚ್ಚದಲ್ಲಿ **8,101 ಶಾಲಾ ಕೊಠಡಿ** ನಿರ್ಮಾಣದ ಐತಿಹಾಸಿಕ ಕ್ರಮ

ಪರಿಶಿಷ್ಟ ಜಾತಿ-ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಕಲ್ಯಾಣ

- SCSP/TSP ಯೋಜನೆಗಳಿಗೆ ರೂ. 28,234 ಕೋಟಿ ಮೀಸಲು
- ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಅಭಿವೃದ್ಧಿ ನಿಗಮಗಳ ಯೋಜನೆಗಳಿಗೆ ಮೂಲ ಅನುದಾನ: ರೂ.580.19 ಕೋಟಿ. ಹೆಚ್ಚುವರಿ ಅನುದಾನ: ರೂ.410 ಕೋಟಿ. ಒಟ್ಟು ರೂ.990.19 ಕೋಟಿ
- ಬಡ ಪ.ಜಾತಿ/ಪಂಗಡಗಳಿಗೆ ನೀಡುತ್ತಿರುವ ಉಚಿತ ವಿದ್ಯುತ್ 45 ರಿಂದ 75 ಯೂನಿಟ್‌ಗಳಿಗೆ ಏರಿಕೆ. 39.25 ಲಕ್ಷ ಕುಟುಂಬಗಳಿಗೆ ಪ್ರಯೋಜನ
- ಲೋಕೋಪಯೋಗಿ ಇಲಾಖೆ SCSP/TSP ಯೋಜನೆಯಡಿ ಒದಗಿಸಿದ ಅನುದಾನದಿಂದ ರೂ. 750 ಕೋಟಿ ವೆಚ್ಚದಲ್ಲಿ 100 ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ ಹಾಗೂ 10 KREIS (ವಸತಿ ಶಾಲೆಗಳ) ಕಟ್ಟಡಗಳ ನಿರ್ಮಾಣ.

ಹಿಂದುಳಿದ ವರ್ಗಗಳ ಕಲ್ಯಾಣ

- ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಗೆ 2022-23ನೇ ಸಾಲಿಗೆ ರೂ.2,249.66 ಕೋಟಿ ಹಂಚಿಕೆ
- ಎಲ್ಲಾ ನಿಗಮಗಳಿಗೆ 2022-23ನೇ ಸಾಲಿಗೆ ರೂ.478.09 ಕೋಟಿ ಹಂಚಿಕೆ
- 165 ಕೋಟಿ ರೂ. ವೆಚ್ಚದಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ 50 "ಕನಕದಾಸ" ವಿದ್ಯಾರ್ಥಿನಿಲಯಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ.

ನೇಕಾರರು ಹಾಗೂ ಕಟ್ಟಡ ಕಾರ್ಮಿಕರಿಗೆ ನೆರವು

- ನೇಕಾರ ಸಮ್ಮಾನ್ ನೆರವಿನ ಮೊತ್ತ ರೂ.2,000 ದಿಂದ **ರೂ.5,000ಕ್ಕೆ** ಹೆಚ್ಚಳ.
- ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ ಜಾರಿ. 2.97 ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ

ಕೃಷಿ ಉತ್ಪಾದನೆ ಪ್ರಮಾಣದಲ್ಲಿ ಹೆಚ್ಚಳ



- **2020-21**ನೇ ಸಾಲಿನಲ್ಲಿ ದಾಖಲೆ ಪ್ರಮಾಣದ **160.28 ಲಕ್ಷ** ಟನ್ ಆಹಾರ ಧಾನ್ಯ ಉತ್ಪಾದನೆ.

ಸ್ತ್ರೀ ಸಾಮರ್ಥ್ಯ ಯೋಜನೆ

- **33,333 ಸ್ವಸಹಾಯ ಗುಂಪುಗಳಿಗೆ** ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸಲು ತಲಾ **ರೂ.1.5 ಲಕ್ಷ**ದಂತೆ ಒಟ್ಟು **ರೂ.500 ಕೋಟಿ** ಸಮುದಾಯ ಬಂಡವಾಳ ನಿಧಿ ಬಿಡುಗಡೆ. ಸುಮಾರು **3.9 ಲಕ್ಷ** ಮಹಿಳೆಯರಿಗೆ ಅನುಕೂಲ.
- **ಅಮೃತ ಸ್ವಸಹಾಯ ಕಿರುಉದ್ದಿಮೆ ಯೋಜನೆ**ಯಡಿ **7,500 ಮಹಿಳಾ ಸ್ವಸಹಾಯ ಗುಂಪುಗಳನ್ನು** ಕಿರು ಉದ್ದಿಮೆ ಸಂಸ್ಥೆಗಳನ್ನಾಗಿ ರೂಪಿಸಲು **ರೂ.75 ಕೋಟಿ** ಬೀಜಧನ ಬಿಡುಗಡೆ.

ಆರೋಗ್ಯ-ಕುಟುಂಬ ಕಲ್ಯಾಣ

- **ಕೋವಿಡ್ ನಿಯಂತ್ರಣಕ್ಕಾಗಿ ವಿಶೇಷ ಕ್ರಮ. 11.56 ಕೋಟಿ ಕೋವಿಡ್ ಲಸಿಕೆಗಳ ಪೂರೈಕೆ**
- ಪ್ರಮುಖ ನಗರಗಳಲ್ಲಿ **438 'ನಮ್ಮ ಕ್ಲಿನಿಕ್'**ಗಳ ಆರಂಭ
- **ಸಮುದಾಯ ಆರೋಗ್ಯ ಕೇಂದ್ರಗಳಾಗಿ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳ (71 ಉತ್ತರ ಕರ್ನಾಟಕ ಭಾಗದಲ್ಲಿ) ಉನ್ನತೀಕರಣ.**

ಸಾಮಾಜಿಕ ಭದ್ರತೆ

- **ಸಂಧ್ಯಾ ಸುರಕ್ಷಾ, ಮನಸ್ವಿನಿ ಮತ್ತು ಮೈತ್ರಿ ಯೋಜನೆ, ವಿಧವೆಯರು ಹಾಗೂ ವಿಶೇಷಚೇತನರ ಮಾಸಿಕ ಪಿಂಚಣಿ ಮೊತ್ತ ರೂ.200 ರಷ್ಟು ಹೆಚ್ಚಳ.**
- **ಆ್ಯಸಿಡ್ ದಾಳಿ ಸಂತ್ರಸ್ತರ ಮಾಸಾಶನ ರೂ.3,000 ದಿಂದ ರೂ.10,000ಕ್ಕೆ ಹೆಚ್ಚಳ.**
- **ಮನೋವೈಕಲ್ಯ: ಶೇ 75ಕ್ಕಿಂತ ಹೆಚ್ಚಿನ ಮನೋವೈಕಲ್ಯ ಹೊಂದಿರುವವರ ಪಿಂಚಣಿ ರೂ.1,400 ರಿಂದ ರೂ.2,000ಕ್ಕೆ ಹೆಚ್ಚಳ.**
- **ಒಟ್ಟಾರೆ 74.22 ಲಕ್ಷ ಜನರಿಗೆ ಅನುಕೂಲ**
- **ಆಶಾ, ಅಂಗನವಾಡಿ ಕಾರ್ಯಕರ್ತೆಯರು /ಸಹಾಯಕರು, ಬಿಸಿಯೂಟ ತಯಾರಕರು/ ಸಹಾಯಕರು, ಗ್ರಾಮ ಸಹಾಯಕರ ಗೌರವಧನ ರೂ.1,000 ರಷ್ಟು ಹೆಚ್ಚಳ.**

ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ

- ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ: ಪ್ರತಿ ಗ್ರಾಮ ಪಂಚಾಯತಿಗೊಂದರಂತೆ ಒಟ್ಟು 27,395 'ಸ್ವಾಮಿ ವಿವೇಕಾನಂದ ಸ್ವಸಹಾಯ ಗುಂಪು'ಗಳನ್ನು ರಚಿಸಿ ಸ್ವಯಂ ಉದ್ಯೋಗ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಯುವಕರನ್ನು ಪ್ರೋತ್ಸಾಹಿಸುವುದು.
- 65 ಲಕ್ಷ ಗ್ರಾಮೀಣ ಯುವಕರಿಗೆ ಕೌಶಲ್ಯ ತರಬೇತಿ ಗುರಿ.

ಹೂಡಿಕೆಯಲ್ಲಿ ಕರ್ನಾಟಕ ನಂ. 1

- ವಿದೇಶಿ ನೇರ ಹೂಡಿಕೆಯಲ್ಲಿ 1ನೇ ಸ್ಥಾನ. ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಮೂಲಕ ಹಾಗೂ ನಂತರದಲ್ಲಿ ಒಟ್ಟು ರೂ.1.31 ಲಕ್ಷ ಕೋಟಿ ಹೂಡಿಕೆಗಳ ಒಪ್ಪಂದಕ್ಕೆ ಸಹಿ
- ನೀತಿ ಆಯೋಗದ ಇಂಡಿಯಾ ಇನ್ನೊವೇಷನ್ ಸೂಚ್ಯಂಕ 2022ರಲ್ಲಿ ರಾಜ್ಯಕ್ಕೆ 1ನೇ ಸ್ಥಾನ
- ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ವಿಶೇಷ ಉದ್ಯೋಗ ನೀತಿ.

ನಗರಾಭಿವೃದ್ಧಿಗೆ ಆದ್ಯತೆ

- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ **ರೂ.6,000 ಕೋಟಿ**
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: (ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ) **ರೂ.3,885 ಕೋಟಿ**

ಅಸಮಾನತೆ ನಿವಾರಣೆ

- **ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅನುದಾನ ದ್ವಿಗುಣ. ರೂ.3,000 ಕೋಟಿ**

ಸಮಸ್ತ ಜನತೆಗೆ 76ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ